## ಹೆಗ್ಗಳಿಕೆಯ ‘ತಗ್ಗಿ ಗಿಡ’

ಇದು ಹೂಗಳಿಂದ ಬಾಗುವ ತಗ್ಗಿಗಿಡ. ನಿಸರ್ಗದತ್ತವಾಗಿ ಕಾಡಿನಲ್ಲಿ ಬೆಳೆಯುತ್ತದೆ. ಇಂದು ಇದು ಅಳಿವಿನ ಅಂಚು ಸೇರಿದೆ. ವೇದಕಾಲದಿಂದಲೂ ಬಳಕೆಯಲ್ಲಿರುವ ಅಗ್ನಿಮಂತ ಎಂಬ ಹೆಸರಿನ ತಗ್ಗಿಗಿಡದ ವೈಜ್ಞಾನಿಕ ಹೆಸರು ಕ್ಲೆರೋಡೆಂಡ್ರಮ್ ಫ್ಲೊಮಿಡಿಸ್. ಆಯುರ್ವೇದದ ದಶಮೂಲಾರಿಷ್ಟ ತಯಾರಿಸುವ ಹತ್ತು ಬೇರುಗಳಲ್ಲಿ ಇದರದೂ ಒಂದು. ಎಲೆ, ಬೇರು, ತೊಗಟೆ ಎಲ್ಲವೂ ಔಷಧೋಪಯೋಗಿಯಾಗಿರುವ ತಗ್ಗಿ ಬೇರಿನ ತಂಬುಳಿ ಚರ್ಮದ ಅಲರ್ಜಿ ನಿವಾರಣೆಯ ಸಿದ್ಧೌಷಧವೂ ಹೌದು.

—ಪ. ರಾಮಕೃಷ್ಣ ಶಾಸ್ತ್ರಿ





## ಗೋಡೆ ಏರಿದ ಗಾಡಿ ಗಾಲಿ

ಜೋಡೆತ್ತಿನ ಮರದ ಗಾಡಿಗಳು ಕೃಷಿ ಸಾಮಾನು ಸರಂಜಾಮು ಸಾಗಿಸಲು, ಪ್ರಯಾಣ ಮಾಡಲು ಬಳಕೆಯಾಗುತ್ತಿದ್ದವು. ಗಟ್ಟಿ ಮರ ಹಾಗೂ ಕಬ್ಬಿಣದ ಪಟ್ಟಿಗಳನ್ನು (ಹಳಿ ಕಟ್ಟುವುದು) ಬಳಸಿ ತಯಾರಿಸಲಾಗುತ್ತಿದ್ದ ಗಾಡಿ ಚಕ್ರಗಳು ಗಾಡಿ ಎಳೆಯುವ ಎತ್ತುಗಳಿಗೆ ತ್ರಾಸದಾಯಕ ಎಂದು ಟೈರ್ ಚಕ್ರಗಳನ್ನು ಬಳಕೆಗೆ ತರಲಾಯಿತು. ಹೀಗೆ ಮರದ ಗಾಡಿಗಳ ಬಳಕೆ ಕಡಿಮೆ ಆಯಿತು. ನೆಲದ ಮೇಲೆ ಓಡುತ್ತಿದ್ದ ಮರದ ಗಾಡಿ ಚಕ್ರಗಳನ್ನು ಅಲಂಕಾರಕ್ಕಾಗಿ ಗೋಡೆಗೆ ಅಳವಡಿಸಬಹುದು ಎಂಬುದನ್ನು ಧಾರವಾಡದ ಒಂದು ವಸತಿ ಗೃಹದಲ್ಲಿ ಕಂಡಾಗ ಹೌದಲ್ಲವೇ ಎನಿಸಿತು.

—ಎಸ್.ಎನ್. ಅಶೋಕಕುಮಾರ್, ಶ್ರವಣಬೆಳಗೊಳ

## ಕಲಾತ್ಮಕ ಶಂಖ

ಅತಿಸೂಕ್ಷ್ಮ ಕುಸುರಿ ಕಲೆಗಳು ಪ್ರಪಂಚದಾದ್ಯಂತ ಕಲಾವಿಮರ್ಶಕರನ್ನು ಮಾತ್ರವಲ್ಲ ಜನಸಾಮಾನ್ಯರನ್ನೂ ಅಚ್ಚರಿಗೊಳಿಸಬಲ್ಲದು. ಅದಕ್ಕೆ ಇಲ್ಲೊಂದು ಉದಾಹರಣೆ ಇದೆ. ಇದನ್ನು ಫಿಲಡೆಲ್ಫಿಯಾ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. 1000 ವರ್ಷಗಳ ಹಳೆಯದಾದ ಚಿತ್ತಾಕರ್ಷಕ ಪಾಂಚಜನ್ಯ!

ಈ ಅಪೂರ್ವ ಶಂಖವನ್ನು ದೇವರಾದ ಶಂಖ, ಚಕ್ರ, ಗದಾ, ಪದ್ಮಧಾರಿ ಶ್ರೀವಿಷ್ಣುವಿಗೆ ಸಮರ್ಪಿಸಲಾಗಿತ್ತು ಎಂದು ಹೇಳಲಾಗುತ್ತಿದೆ. ಇದರಲ್ಲಿರುವ ವಿಷ್ಣುನ ಗರುಡ ಸವಾರಿ. ಗಣಪತಿ ಸೇರಿದಂತೆ ಅನೇಕ ಆಕೃತಿಗಳ ನೈಪುಣ್ಯತೆಯ ಕೆತ್ತನೆ ಅಡಗಿದೆ.

—ಜೀವನ್ ಶೆಟ್ಟಿ



